

ಸ್ವಿಟ್ಜರ್ಲೆಂಡ್ ಸಂಸದೆ ರೀಟಾ ಅವರ ನೇತೃತ್ವದ ನಿಯೋಗ ಶುಕ್ರವಾರ ಬೆಂಗಳೂರಿನಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಭೇಟಿಯಾಗಿ ವಿಧಾನ ಪರಿಷತ್ ಕಾರ್ಯಕಲಾಪಗಳ ಕುರಿತು ಮಾಹಿತಿ ಪಡೆಯಿತು. ಶತಮಾನ ಕಂಡ ಕರ್ನಾಟಕ ವಿಧಾನ ಪರಿಷತ್ತಿನ ಸುದೀರ್ಘ ಇತಿಹಾಸ, ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಮಹತ್ವ, ಕಾರ್ಯ ಚಟುವಟಿಕೆ, ನೀತಿ ನಿಯಮ, ಆಡಳಿತ/ಕಾರ್ಯಾಂಗ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವದಲ್ಲಿ ವಿಧಾನ ಪರಿಷತ್ತಿಗೆ ಇರುವ ಮಹತ್ವ ಮತ್ತಿತರ ಸಂಗತಿಗಳನ್ನು ನಿಯೋಗಕ್ಕೆ ಹೊರಟ್ಟಿ ವಿವರಿಸಿದರು.

# ಪರಿಷತ್‌ಗೆ ಸ್ವಿಜರ್‌ಲ್ಯಾಂಡ್ ನಿಯೋಗ ಭೇಟಿ

**ಹುಬ್ಬಳ್ಳಿ:** ಸ್ವಿಜರ್‌ಲ್ಯಾಂಡಿನ ಸಂಸದೆ ರೀಟಾ ಅವರ ನೇತೃತ್ವದ ನಿಯೋಗ ಶುಕ್ರವಾರ ಬೆಂಗಳೂರಿನಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಅವರನ್ನು ಭೇಟಿಯಾಗಿ ವಿಧಾನ ಪರಿಷತ್ ಕಾರ್ಯ ಕಲಾಪಗಳ ಕುರಿತು ಮಾಹಿತಿ ಪಡೆಯಿತು.



ಶತಮಾನ ಕಂಡ ಕರ್ನಾಟಕ ವಿಧಾನ ಪರಿಷತ್ತಿನ ಸುದೀರ್ಘ ಇತಿಹಾಸ, ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಮಹತ್ವ, ಕಾರ್ಯ ಚಟುವಟಿಕೆ, ನೀತಿ ನಿಯಮ, ಆಡಳಿತ/ಕಾರ್ಯಾಂಗ ವ್ಯವಸ್ಥೆ ಹಾಗೂ ಪ್ರಜಾಪ್ರಭುತ್ವದಲ್ಲಿ ವಿಧಾನ ಪರಿಷತ್ತಿಗೆ ಇರುವ ಮಹತ್ವ ಮತ್ತಿತರ ಸಂಗತಿಗಳನ್ನು ನಿಯೋಗಕ್ಕೆ ಹೊರಟ್ಟಿ ವಿವರಿಸಿದರು.

ಇದೇ ಸಂದರ್ಭದಲ್ಲಿ ಉಭಯ ಕುಶಲೋಪರಿಗಳನ್ನು ಹಂಚಿಕೊಂಡ ನಿಯೋಗ ತಮ್ಮ ತಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಬಗ್ಗೆ ಮಾಹಿತಿ ಹಂಚಿಕೊಂಡರು. ಹೊರಟ್ಟಿ ಅವರು ವಿಧಾನ ಪರಿಷತ್ತಿಗೆ ಸತತ ಎಂಟು ಬಾರಿ ಆಯ್ಕೆ ಆಗುವ ಮೂಲಕ 'ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್' ಹಾಗೂ 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್' ದಾಖಲೆಯ ಗೌರವಕ್ಕೆ ಪಾತ್ರರಾದ ಸಂಗತಿಯನ್ನು ತಿಳಿದ ನಿಯೋಗದ ಸದಸ್ಯರು ಅಭಿನಂದನೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಸ್ವಿಜರ್‌ಲ್ಯಾಂಡಿನ ವಿವಿಧ ಕ್ಷೇತ್ರದ ಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು, ಸಭಾಪತಿ ಆಪ್ತ ಕಾರ್ಯದರ್ಶಿ ಶೈಲಾ ಕೆ.ಡಿ., ವಿಶೇಷ ಕರ್ತವ್ಯ ಅಧಿಕಾರಿ ಡಾ. ಮಹೇಶ್ ವಾಳ್ವೇಕರ್, ಹಿರಿಯ ಅಧಿಕಾರಿ ಎಚ್.ಡಿ. ಪಾಟೀಲ ಸೇರಿದಂತೆ ವಿಧಾನ ಪರಿಷತ್ತಿನ ಸಿಬ್ಬಂದಿ ಉಪಸ್ಥಿತರಿದ್ದರು.